ಎಂ.ಇ.ಐ ಕಾರ್ಖಾನೆಯು ರಾಜ್ಯ ಸರ್ಕಾರದ ಉದ್ದಿಮೆಯಾಗಿದ್ದು, ಇದರಲ್ಲಿ ರಾಜ್ಯ ಸರ್ಕಾರವು ಶೇ.52.23 ರಷ್ಟು ಶೇರುಗಳನ್ನು ಹೊಂದಿದ್ದು ಉಳಿದ ಶೇಕಡ 47.77 ರಷ್ಟು ಷೇರನ್ನು ಎಲ್.ಐ.ಸಿ.ಯು.ಟಿ.ಐ ಮುಂತಾದ ಸಂಸ್ಥೆಗಳು ಹೊಂದಿವೆ.

ಈ ಕಂಪನಿಯು ಕೆಲವು ವರ್ಷಗಳಿಂದಲೂ ನಷ್ಟವನ್ನು ಅನುಭವಿಸುತ್ತಿರುವುದರಿಂದ ಈ ಕಂಪನಿಯ ಪುನಃಸಜ್ಜೀಕರಣ ಆದುನೀಕರಣಗೊಳಿಸುವ ಸಂಬಂಧವಾಗಿ ಪರಿಷ್ಕರಿಸಲ್ಪಟ್ಟ ಪ್ರಸ್ತಾವನೆಯನ್ನು ಮುಂಬಯಿಯಲ್ಲಿರುವ ಕೈಗಾರಿಕಾ ಅಭಿವೃದ್ಧಿ ಬ್ಯಾಂಕ್ ಆಫ್ ಇಂಡಿಯಾ ಇವರಿಗೆ ಕಂಪನಿಯ ಪತ್ರದ ಉಲ್ಲೇಖ ಎಫ್ಎ 88 ಐಡಿಬಿಐ ದಿನಾಂಕ : 1-12-88 ರಲ್ಲಿ ಹಾಜರು ಪಡಿಸಿದೆ. ಕಂಪನಿಯು ಯಥಾಸ್ಥಿತಿಯಲ್ಲಿ ಕೂಡ ಬಂದ ನಷ್ಟ ಮತ್ತು ಸಾಲಗಳು ಜಾಸ್ತಿಯಿರುವುದರಿಂದ ಮತ್ತೆ ಕಂಪನಿಯ ಪುನಃ ಸಜ್ಜೀಕರಣ ಆಧುನೀಕರಣಕ್ಕೆ ನೀಡುವ ಸಾಲದ ಬಡ್ಡಿಯ ಹೊಣೆಗಳನ್ನು ಕಂಪನಿಯು ಹೊರಲು ಸಾಧ್ಯವಾಗದೇ ಇರುವುದರಿಂದ ಕೈಗಾರಿಕಾ ಅಭಿವೃದ್ಧಿ ಬ್ಯಾಂಕ್‌ನವರು ಮತ್ತೆ ಮುಂಗಡವಾಗಿ ಹಣ ನೀಡುವ ಬಗ್ಗೆ ತನ್ನ ಒಪ್ಪಿಗೆಯನ್ನು ನಿರಾಕರಿಸಿದೆ. ಈ ಸಂಸ್ಥೆಯವರು ಈ ಕಂಪನಿಯನ್ನು ಸಾಧ್ಯವಾದಷ್ಟು ಮಟ್ಟಿಗೆ ಯಾವುದಾದರೂ ಇತರೆ ಕಂಪನಿಗೆ ವಿಲೀನ ಮಾಡುವ ಬಗ್ಗೆ ಪರಿಶೀಲಿಸುವುದು ಉತ್ತಮವೆಂದು ಸಲಹೆ ಮಾಡಿರುತ್ತಾರೆ. ಮುಂದುವರೆದು ರಾಜ್ಯ ಸರ್ಕಾರವು ಈ ಕಂಪನಿಗೆ ಬಡ್ಡಿಯಿಲ್ಲದೆ ಅವಶ್ಯಕ ಬಂಡವಾಳವನ್ನು ಹೂಡಲು ಕೇಳಿಕೊಳ್ಳಬೇಕೆಂದೂ ಸಹ ಐ.ಡಿ.ಬಿ.ಐ ಸಂಸ್ಥೆಯವರು ಸಲಹೆ ಮಾಡಿರುತ್ತಾರೆ.

ಈ ಕಂಪನಿಯನ್ನು ಇತರೆ ಯಾವುದೇ ಸಾರ್ವಜನಿಕ ಉದ್ಯಮಗಳಾದ ಎನ್.ಜಿ.ಇ.ಎಫ್, ಬಿ.ಇ.ಎಲ್ ಮತ್ತು ಬಿ.ಹೆಚ್.ಇ.ಎಲ್ ಹಾಗೂ ಇತರೆ ಕಂಪನಿಯವರು ತೆಗೆದುಕೊಳ್ಳಲು ಇಷ್ಟಪಡುವರೇ ಎಂದು ತಿಳಿಯಲು ಪ್ರಯತ್ನಿಸಲಾಗಿದೆ. ಆದರೆ ಈ ದಿನದವರೆವಿಗೂ ಯಾವುದೇ ಕಂಪನಿಯಿಂದ ಅನುಕೂಲಕರವಾದ ಉತ್ತರ ಬಂದಿರುವುದಿಲ್ಲ.

ಈ ಕಂಪನಿಯನ್ನು "ರಿಲೀಫ್ ಅಂಡರ್ ಟೇಕಿಂಗ್" ಎಂಬುದಾಗಿ ಪರಿಗಣಿಸಿದ್ದ ಅವಧಿಯು ದಿನಾಂಕ 4-1-91ಕ್ಕೆ ಮುಗಿದಿರುತ್ತದೆ ಮತ್ತು ಸರ್ಕಾರವು ಇದನ್ನು ಮತ್ತೆ ಮುಂದುವರಿಸಿರುವುದಿಲ್ಲ.

ಬೆಸ್ಟ್ ಅಂಡ್ ಕ್ರಾಂಪ್ಟನ್ ಕಂಪನಿ ಮುಂತಾದ ಕೆಲವು ಖಾಸಗಿ ಕಂಪನಿಗಳು ಈ ಕಂಪನಿಯನ್ನು ತೆಗೆದುಕೊಳ್ಳಲು ತಮ್ಮ ಆಸಕ್ತಿಯನ್ನು ತೋರಿಸಿ ಕಂಪನಿಯ ಸ್ಥಿತಿಗತಿಯ ಬಗ್ಗೆ ಅಧ್ಯಯನ ನಡೆಸಲು ಕೇಳಿಕೊಂಡು ಕಂಪನಿಯ ಆಸ್ತಿಯ ಪ್ರಾಕೃತಿಕ ಸ್ಥಿತಿಯನ್ನು ಪರಿಶೀಲಿಸುತ್ತಿವೆ. ಈ ಕಂಪನಿಯನ್ನು ತೆಗೆದುಕೊಳ್ಳುವ ಬಗ್ಗೆ ಒಡಂಬಡಿಕೆ ಮಾಡಿಕೊಂಡಿರುವುದಿಲ್ಲ.

ಓಕಳೀಪುರದಲ್ಲಿರುವ ಕಂಪನಿಗೆ ಸೇರಿದ ಸುಮಾರು ಐದು ಎಕರೆ ಭೂಮಿಯನ್ನು ಮಾರಾಟ ಮಾಡಿ ಆ ಹಣವನ್ನು ಕಂಪನಿಯ ಅಭಿವೃದ್ಧಿಗೆ ಉಪಯೋಗಿಸುವ ಸಲಹೆ ಇದೆ. ಪ್ರಸ್ತುತ ಎಂ.ಇ.ಐ. ಕಂಪನಿಯ ಅಧ್ಯಕ್ಷರು ಮತ್ತು ಆಡಳಿತ ನಿರ್ದೇಶಕರು ತಮ್ಮ ಶಕ್ತಿ ಮೀರಿ ಪ್ರಯತ್ನಿಸಿ ಓಕಳೀಪುರದಲ್ಲಿರುವ ಭೂಮಿಯಿಂದ ಕಡೆಯ ಪಕ್ಷ 10.00ಕೋಟಿ ರೂಪಾಯಿ ಪಡೆಯುವ ಬಗ್ಗೆ ಸರ್ಕಾರದ ಜೊತೆ ವ್ಯವಹರಿಸಿರುವರು. ಈ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

(3) ಬೆಂಗಳೂರು ನಗರದಲ್ಲಿ ರಸ್ತೆ ಉಬ್ಬುಗಳಿಗೆ ಬಣ್ಣ ಬಳಿಯುವುದು ಮತ್ತು ಎಚ್ಚರಿಕೆ ಬೋರ್ಡುಗಳನ್ನು ಹಾಕುವುದು.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) : ಬೆಂಗಳೂರು ನಗರದಲ್ಲಿ ವಾಹನಗಳ ವೇಗವನ್ನು ಕಡಿಮೆ ಮಾಡುವ ಸಲುವಾಗಿ ಬೆಂಗಳೂರು ನಗರ ಸಂಚಾರಿ ಪೋಲೀಸರು ಎಲ್ಲಾ ಕಡೆಗಳಲ್ಲೂ ರಸ್ತೆ ಉಬ್ಬುಗಳನ್ನು ನಿರ್ಮಿಸಿರುತ್ತಾರೆ. ಆದರೆ

ಬಹುತೇಕ ಈ ರಸ್ತೆ ಉಬ್ಬುಗಳಿಗೆ ಬಿಳಿ ಹಾಗು ಹಳದಿ ಬಣ್ಣಗಳನ್ನು ಬಳಿದಿರುವುದಿಲ್ಲ. ಇದರಿಂದ ವಾಹನ ಚಾಲಕರಿಗೆ ಈ ರಸ್ತೆ ಉಬ್ಬುಗಳ ಬಗ್ಗೆ ಯಾವುದೇ ಮುನ್ಸೂಚನೆ ಇಲ್ಲದೆ ಅಪಘಾತಗಳು ಉಂಟಾಗಲು ಕಾರಣವಾಗಿದೆ. ಇದರ ಜೊತೆಗೆ ಈ ರಸ್ತೆ ಉಬ್ಬುಗಳ ಬಗ್ಗೆ ಒಂದು ಎಚ್ಚರಿಕೆ ಬೋರ್ಡುಗಳನ್ನು ಹಾಕುವುದು ಅತಿ ಅವಶ್ಯಕವಾಗಿದೆ. ಆದ್ದರಿಂದ ಬೆಂಗಳೂರು ನಗರ ಸಂಚಾರಿ ಪೋಲೀಸ್ ವಿಭಾಗದವರಿಗೆ ಹೆಚ್ಚಿನ ಹಣವನ್ನು ಒದಗಿಸಿ, ಕೂಡಲೇ ಎಲ್ಲ ರಸ್ತೆ ಉಬ್ಬುಗಳಿಗೆ ಬಣ್ಣಗಳನ್ನು ಹಾಕಲು ಹಾಗು ಎಚ್ಚರಿಕೆ ಬೋರ್ಡುಗಳನ್ನು ಹಾಕಲು ಕ್ರಮ ಕೈಗೊಳ್ಳಬೇಕೆಂದು ಸನ್ಮಾನ್ಯ ಗೃಹ ಸಚಿವರನ್ನು ಕೋರುತ್ತೇನೆ.

ಶ್ರೀ ಧರ್ಮಸಿಂಗ್ (ಗೃಹಸಚಿವರು) : ಮಾನ್ಯ ಉಪಾಧ್ಯಕ್ಷಿಣಿಯವರೆ, ತಮ್ಮ ಅಪ್ಪಣೆ ಪಡೆದು ಈ ಹೇಳಿಕೆಯನ್ನು ನೀಡಬಯಸುತ್ತೇನೆ.

ಬೆಂಗಳೂರು ನಗರ ಸಂಚಾರ ವಿಭಾಗದ ಪೋಲೀಸರು ಬೆಂಗಳೂರು ನಗರ ಪಾಲಿಕೆಯವರಲ್ಲಿ ಚರ್ಚಿಸಿ, ಬೆಂಗಳೂರು ನಗರದಲ್ಲಿರುವ ರಸ್ತೆಗಳಲ್ಲಿ ಮತ್ತು ಸಾರ್ವಜನಿಕರು ವಾಸಿಸುವ ಕೆಲವು ಸ್ಥಳಗಳಲ್ಲಿ ವಾಹನಗಳ ವೇಗವನ್ನು ಕಡಿಮೆ ಮಾಡುವ ಸಲುವಾಗಿ ರಸ್ತೆಯ ಉಬ್ಬರಗಳನ್ನು ನಿರ್ಮಿಸಿರುತ್ತಾರೆ. ಈ ಬಗ್ಗೆ ಬೆಂಗಳೂರು ನಗರದಲ್ಲಿ 140 ಕಡೆ ರಸ್ತೆಯ ಉಬ್ಬರಗಳನ್ನು ನಿರ್ಮಿಸುತ್ತಾರೆ. ವಾಹನ ಚಾಲಕರಿಗೆ ಎಚ್ಚರಿಕೆಯ ಮುನ್ಸೂಚನೆ ನೀಡಲು ಉಬ್ಬರಗಳ ಮೇಲೆ ಅನೇಕ ಕಡೆ ಬಿಳಿ ಬಣ್ಣವನ್ನು ಹಾಕಿಸಿರುತ್ತೆ, ಕೆಲವು ಕಡೆಗಳಲ್ಲಿ ರಸ್ತೆಯ ಉಬ್ಬರಗಳಲ್ಲಿ ಅಲ್ಲಲ್ಲಿ ಬಿಳಿ ಬಣ್ಣ ಅಳಿಸಿ ಹೋಗಿರುತ್ತೆ. ಬಿಳಿ ಬಣ್ಣ ಹಚ್ಚಲು ಮತ್ತು ಎಚ್ಚರಿಕೆಯ ಸೂಚನಾ ಫಲಕಗಳನ್ನು ಹಾಕಲು ಬೆಂಗಳೂರು ನಗರ ಪಾಲಿಕೆಯವರು ಸಾಕಾಗುವಷ್ಟು ಬಣ್ಣವನ್ನು ಪೋಲೀಸ್ ಇಲಾಖೆಗೆ ಒದಗಿಸುತ್ತಾರೆ, ಹಾಗೂ ಪೋಲೀಸ್ ಇಲಾಖೆ (ಸಂಚಾರಿ ವಿಭಾಗ) ಬಣ್ಣ ಹಚ್ಚುವ ಕಾರ್ಯವನ್ನು ನಿರ್ವಹಿಸುತ್ತದೆ. ಈ ಕೆಲಸವನ್ನು ಈಗಾಗಲೇ ಎಷ್ಟೋ ಕಡೆ ಮಾಡಲಾಗಿದೆ ಮತ್ತು ಮಾಡಲಾಗುತ್ತಿದೆ. ಈ ಬಗ್ಗೆ ಬೆಂಗಳೂರು ನಗರದಲ್ಲಿ ವಿಶೇಷ ರೀತಿಯ ತಪಾಸಣೆ ಮಾಡಿ, ಅವಶ್ಯಕತೆ ಇರುವ ಇತರೆ ಎಲ್ಲಾ ಸ್ಥಳಗಳಲ್ಲೂ ರಸ್ತೆಯ ಉಬ್ಬರಗಳನ್ನು ಮತ್ತು ಎಚ್ಚರಿಕೆಯ ಸೂಚನಾ ಫಲಕಗಳನ್ನು ಹಾಕಿಸಿ ಬಿಳಿ ಬಣ್ಣವನ್ನು ಹಚ್ಚಲು ಕ್ರಮ ಕೈಗೊಳ್ಳಲಾಗುವುದು.

(4) ಹಾರೋಬಂಡೆ ಕಲ್ಲು ಒಡೆಯುವವರ ಕೈಗಾರಿಕಾ ಸೇವಾ ಸಂಘ

ಶ್ರೀ ಸಿ.ವಿ. ವೆಂಕಟರಾಯಪ್ಪ (ಬಾಗೇಪಲ್ಲಿ) : ಮಾನ್ಯ ಉಪಾಧ್ಯಕ್ಷರೆ, ಹಾರೋಬಂಡೆ ಕಲ್ಲು ಒಡೆಯುವವರ ಕೈಗಾರಿಕಾ ಸೇವಾ ಸಂಘ, ಲಿಂಗಶೆಟ್ಟಿಪುರ, ಚಿಕ್ಕಾಬಳ್ಳಾಪುರ ತಾಲ್ಲೂಕು- ಇವರು ಹಾರೋಬಂಡೆ ಪ್ರದೇಶದಲ್ಲಿರತಕ್ಕ ಕಲ್ಲು ಬಂಡೆಗಳನ್ನು ಒಡೆದು ಸಾಗಿಸಲು 1975ರಲ್ಲಿ ಜಿಯಾಲಜಿ ಇಲಾಖೆಯಿಂದ ಪರವಾನಗಿ ತೆಗೆದುಕೊಂಡಿರುತ್ತಾರೆ. ಅಂದಿನಿಂದ ಕೆಲವು ವರ್ಷಗಳ ಕಾಲ ಲಾರಿ ಒಂದಕ್ಕೆ 5 ರಿಂದ 10 ರೂಪಾಯಿಗಳ ವರೆಗೆ ಸುಂಕ ವಸೂಲ್ಮಾಡುತ್ತಿದ್ದರು. 1980ರಿಂದ ಈಚೆಗೆ 30ರಿಂದ 40ರೂಪಾಯಿಗಳವರೆಗೆ ವಸೂಲ್ಮಾಡಿಕೊಂಡು ಅದರಲ್ಲಿ ಬಹಳ ಕಡಿಮೆ ಮೊತ್ತವನ್ನು ಸಂಘಕ್ಕೆ ಜಮಾ ಮಾಡಿಕೊಳ್ಳುತ್ತಿದ್ದರು. ಸಾರ್ವಜನಿಕರಿಂದ ಗಲಾಟೆಗಳು ಜಾಸ್ತಿ ಆದಮೇಲೆ ಬಂಡೆಗಳ ಸುಂಕ ವಸೂಲಿ ಹಕ್ಕನ್ನು ಹರಾಜು ಮಾಡುವ ನೆಪದಲ್ಲಿ ಮೊಹೆಯಾನ ಸುಮಾರು ಒಂದು ಸಾವಿರ ರೂಪಾಯಿಗಳ ಮೊತ್ತಕ್ಕೆ ನಿಲ್ಲಿಸಿಕೊಂಡು ವಸೂಲಿ ಹಕ್ಕನ್ನು ಚಿಕ್ಕಬಳ್ಳಾಪುರ ಟೌನಿನ ಪೈಲ್ವಾನರಿಗೆ ಕೊಟ್ಟಿರುತ್ತಾರೆ. ಇದರಿಂದ ಸಂಘಕ್ಕೆ ಮಾಹೆಯಾನ ಸುಮಾರು 40000 ರೂಪಾಯಿಗಳು ನಷ್ಟವಾಗಿರುತ್ತೆ. ಈ ಬಗ್ಗೆ ಸಾರ್ವಜನಿಕರು ದೂರು ಕೊಟ್ಟಿದ್ದರ ಮೇಲೆ ಅಡೀಷನಲ್ ಡೈರೆಕ್ಟರ್ ಆಫ್ ಇಂಡಸ್ಟ್ರೀಸ್ ಅಂಡ್ ಕಾಮರ್ಸ್ ಹಾಗೂ ಎಕ್ಸ್-ಅಫಿಷಿಯೋ ರಿಜಿಸ್ಟ್ರಾರ್ ಆಫ್ ಕೊ-ಆಪರೇಟಿವ್ ಸೊಸೈಟೀಸ್ ಅವರು